

ಜರ್ಮನಿಯ ಉಲ್ಲಾಪಲ್ಲಾ 'ಕ್ರೇಜಿ ಹೌಸ್' ಬಗ್ಗೆ ಇದೇ ಪುಟದಲ್ಲಿ ಬಂದಿತ್ತು. ಆಗ ಅಡಿಪಾಯವನ್ನು ಛಾವಣಿಯ ಕೆಳಗೆ ಹಾಕಿದ್ದು ಹೇಗೆ ಎಂದು ತಲೆ ಕೆಳಗೆ ಮಾಡಿಕೊಂಡಿದ್ದರು ಹಲವು ಮಂದಿ. ಆದರೆ ಈಗ ಒಳಾಂಗಣ ವಿನ್ಯಾಸವೂ ಮುಗಿದಿದ್ದು ಈ ಶೌಚಾಲಯ ನೋಡಿ ಮೂರ್ಛೆ ಹೋಗುವುದೊಂದು ಬಾಕಿ- ಯಕಶ್ಚಿತ ಮಲವಿಸರ್ಜನೆಗೆ ಇಷ್ಟೊಂದು ಸರ್ಕಸ್ ಮಾಡಬೇಕೇ ಎಂದು.

ರೋಮ್‌ನಲ್ಲಿ ಮೇಯರ್ ಭ್ರಷ್ಟಾಚಾರ ಮಿತಿಮೀರಿದ್ದು ಪಾಪ, ಕೌನ್ಸಿಲ್ ಸದಸ್ಯರಿಗೆ ನಾಚಿಕೆಯಾಗಿಬಿಟ್ಟಿದೆ. 'ಗೌರವಾನ್ವಿತ ಮೇಯರ್, ನಮ್ಮನ್ನು ಅಂಡರ್‌ವೇರ್‌ನಲ್ಲಿ ನಿಲ್ಲಿಸಿಬಿಟ್ಟಿದ್ದೀರಾ?'ಎಂದು ಘೋಷಣೆ ಕೂಗುತ್ತಾ ನಿಂತರು. ನಮ್ಮಲ್ಲಾಗಿದ್ದರೆ ಮೇಯರ್‌ಗೇ ತಡೆದು ನಿಲ್ಲಿಸಿ ಅವರೇ ನಾಚುವಂತೆ 'ಗೌರವ' ಸಲ್ಲಿಸುತ್ತಿದ್ದರು.



ದಕ್ಷಿಣ ಆಫ್ರಿಕಾದ ಅಧ್ಯಕ್ಷ ಜೇಕಬ್ ಝೂಮಾ ಹಲವು ಹೆಂಡಿರ ಗಂಡ. 20 ಮಕ್ಕಳು. ಈ ಕುಟುಂಬದ ನಿರ್ವಹಣೆಗೇ ವಿಶೇಷ ಬಜೆಟ್. ಅದು ದೇಶದ ಬಜೆಟ್‌ನ ಎರಡು ಪಟ್ಟು ಹೆಚ್ಚು. 20 ದಶಲಕ್ಷ ಡಾಲರ್. ಹೆಂಡತಿಯರು, ಮಕ್ಕಳ ಊಟ, ಉಡುಪು, ಪ್ರಯಾಣಕ್ಕೇನೋ ಹಣ ನೀಡುವುದು ಸರಿ. ಆದರೆ ಅವರೆಲ್ಲರಿಗೂ ಸೆಲ್‌ಫೋನ್, ಲ್ಯಾಪ್‌ಟಾಪ್, ಪ್ರಿಂಟರ್ಸ್‌ಗಳು.. ಇರಲಿ ಇದು ಆಧುನಿಕ ಯುಗ. ಬಳಸಲು ಬರದಿದ್ದರೂ ಇಟ್ಟುಕೊಂಡು ಸಂತಸಪಡಬಹುದು. ಆದರೆ ಝೂಮಾನ 6 ತಿಂಗಳ ಮಗುವಿಗ್ಯಾಕೋ ಲ್ಯಾಪ್‌ಟಾಪ್?

ಕ್ರಿಕೆಟ್, ಫುಟ್ಬಾಲ್ ಪಂದ್ಯಗಳೆಂದರೆ ಅಭಿಮಾನಿಗಳಿಗೆ ಊಟ, ನಿದ್ರೆ, ಕೊನೆಗೆ ಉಡುಪು ಕೂಡಾ ಬೇಡ. ಇಂಗ್ಲೆಂಡ್‌ನಲ್ಲಂತೂ ಮೈದಾನಗಳಲ್ಲಿ ಉಡುಪನ್ನು ದಾನ ಕೊಟ್ಟು ಮೈ ಮಾತ್ರ ಉಳಿಸಿಕೊಂಡು ಓಡುವವರೇ ಬಹಳ. ಯಾವಾಗಲೂ ಈ ವಿಷಯದಲ್ಲಿ ಮಹಿಳೆಯರೇ ಒಂದು ಹೆಜ್ಜೆ ಮುಂದಿದ್ದರು. ಆದರೆ ಈಗ ಪುರುಷರೂ ಸಮಾನತೆಗಾಗಿ ಹೋರಾಟ ನಡೆಸುತ್ತಿರುವುದು ಸ್ವಾಗತಾರ್ಹ1



ಬ್ರಿಟನ್ನಿನ ಲೈಂಗಿಕ ಚಿತ್ರಗಳ ನಿರ್ದೇಶಕಿ ಅನ್ನಾ ಸ್ಪ್ಯಾನ್ ಲಿಬರಲ್ ಡೆಮೊಕ್ರೆಟಿಕ್ ಪಕ್ಷದಲ್ಲಿ ಹೊಸ ಅಲೆ ಎಬ್ಬಿಸಿದ್ದಾಳೆ. ಹೊಸ ಚಿತ್ರಗಳ ಬಿಸಿಬಿಸಿ ದೃಶ್ಯಗಳಿಂದಲ್ಲ, ಪಾರ್ಲಿಮೆಂಟ್ ಚುನಾವಣೆಗೆ ಟಿಕೆಟ್ ಗಿಟ್ಟಿಸುವ ಮೂಲಕ. ಗೆದ್ದರೆ ಮಹಿಳಾ ಹಕ್ಕುಗಳಿಗಾಗಿ ಹೋರಾಟವಂತೆ. ವಯಸ್ಸಾದ ಮೇಲೆ ವೈರಾಗ್ಯ ಸಹಜವೇ!



ಮಾಧ್ಯಮದಲ್ಲಿ ಕೆಲಸ ಮಾಡುವವರು ಎಷ್ಟು ವರ್ಷಗಳವರೆಗೆ ಕೆಲಸ ಮಾಡಬಹುದು? 35, 40.. ವರ್ಷಗಳು! ಇದಾಹೊ ಸಂಪಾದ ಡಾರ್ಲಿನ್ ಮಾರ್ಕಸ್ ಅಲ್ಲಿಯ ಟ್ರಿಬ್ಯುನ್-ಪ್ರೆಸ್‌ನಲ್ಲಿ ಸುವರ್ಣ ಮಹೋತ್ಸವ ಪೂರೈಸಿ ಗಿನ್ನೆಸ್ ದಾಖಲೆ ಪುಸ್ತಕ ಸೇರಿದ್ದಾಳೆ. 80ರ ಹರೆಯದಲ್ಲೂ ಪೇಜ್-3 ಸುದ್ದಿ ವರದಿ ಮಾಡುವ ಹುಮ್ಮಸ್ಸಂತೆ ಈಕೆಗೆ.



ಕ್ರಿಕೆಟ್‌ನಲ್ಲಿ ಬೆಟ್ಟಿಂಗ್ ಕಟ್ಟಿದರೆ ಕೈಗೆ ಕೋಳ ಹಾಕುತ್ತಾರೆ? ಹಾಕಿಯಲ್ಲಿ ಕಟ್ಟಿದರೆ ಬಿಯರ್ ಬಾಕ್ಸ್ ಉಡುಗೊರೆ. ಒಲಿಂಪಿಕ್ಸ್ ಹಾಕಿಯಲ್ಲಿ ಗೆದ್ದ ಕೆನಡಾಗೆ ಸೋತ ಅಮೆರಿಕ ಬಿಯರ್ ಕ್ಯಾನುಗಳ ಉಡುಗೊರೆ ನೀಡಿತು. ದೇಶ- ದೇಶಗಳ ಮಧ್ಯೆ ಬೆಟ್ಟಿಂಗಾ? ಇಲ್ಲಿ ಬೆಟ್ಟಿಂಗ್ ಅಖಾಡಾದಲ್ಲಿದ್ದವರು ಎರಡೂ ದೇಶಗಳ ಮುಖಂಡರಾದ ಒಬಾಮ ಮತ್ತು ಹಾರ್ಪರ್.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65